ಕೇಂದ್ರ ಕೃಷಿ ಸಚಿವ ರಾಧಾಮೋಹನ್ ಸಿಂಗ್ ಹೇಳಿಕೆ

# ವೈಜ್ಞಾನಿಕ ಬೇಸಾಯಕ್ಕೆ ಕೃಷಿಕರಿಗೆ ಉತ್ತೇಜನ

▸ ದಿಗಂತ ವರದಿ: ಯಲಹಂಕ, ಜು.1

ಆದಾಯ ದ್ವಿಗುಣವಾಗಲು ವೈಜ್ಞಾನಿಕ ಬೇಸಾಯದ ಕಡೆಗೆ ಕೃಷಿಕರನ್ನು ಉತ್ತೇಜಿಸುವ ಸಲುವಾಗಿ ಕೇಂದ್ರ ಕೃಷಿ ಮಂತ್ರಾಲಯ ಹಲವು ಸಂಶೋಧನೆ ಹಾಗೂ ಕಾರ್ಯಕ್ರಮ ಹಮ್ಮಿಕೊಂಡಿದೆ ಎಂದು ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಸಚಿವ ರಾಧಾ ಮೋಹನ್ ಸಿಂಗ್ ಹೇಳಿದರು.

**2022ಕ್ಕೆ ರೈತರ ಆದಾಯ ದ್ವಿಗುಣಕ್ಕಾಗಿ ಸಂಶೋದನೆ:** ರಾಷ್ಟ್ರೀಯ ಕೃಷಿ ಪ್ರಾಮುಖ್ಯ ಕೀಟಗಳ ಬ್ಯೂರೋ ಸಂಶೋಧನಾ ಕೇಂದ್ರ, ಏರ್ಪಡಿಸಿದ್ದ ಕೃಷಿ ಸಂಶೋಧನೆಗಳ ಅವಲೋಕನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ರೈತರು ಕೃಷಿ ಸುಸ್ಥಿರತೆಯನ್ನು ಕಾಣಬೇಕು. 2022ರ ವೇಳೆಗೆ ದೇಶದ ರೈತರ ಆದಾಯ ದ್ವಿಗುಣವಾಗಬೇಕು. ಈ ನಿಟ್ಟಿನಲ್ಲಿ ಕೃಷಿ, ತೋಟಗಾರಿಕೆ, ಮೀನುಗಾರಿಕೆ, ಪಶುಸಂಗೋಪನಾ ವಲಯಗಳಲ್ಲಿ ಸಾಕಷ್ಟು ಸಂಶೋಧನೆಗಳು ನಡೆಯಬೇಕು. ಹಾಗೆಯೇ, ಈ ತಂತ್ರಜ್ಞಾನಗಳು ರೈತರನ್ನು ತಲುಪಿ ವೈಜ್ಞಾನಿಕ ಬೇಸಾಯವನ್ನು ರೈತರು ಅಳವಡಿಸಿಕೊಳ್ಳುವಂತೆ ಪ್ರೇರೆಪಿಸಿಲು ನೂತನ ಕಾರ್ಯಕ್ರಮಗಳನ್ನು ಕೇಂದ್ರ ಕೃಷಿ ಮಂತ್ರಾಲಯ ಆಯೋಜಿಸಿದೆ ಎಂದರು.

**ಸಂಶೋದನೆ ಬಳಕೆಯಾದಾಗ ಮಾತ್ರ ಆರ್ಥಿಕ ಪ್ರಗತಿ ಸಾಧ್ಯ:** ನವದೆಹಲಿಯ ಐಸಿಎಆರ್‌ನ ಮಹಾನಿರ್ದೇಶಕ ಡಾ.ಟಿ. ಮಾಹಾಪಾತ್ರ ಮಾತನಾಡಿ, ದೇಶದ ವಿವಿಧ ಬಾಗಗಳಲ್ಲಿ ನಡೆಯುತ್ತಿರುವ ಸಂಶೋಧನೆಗಳು ಆಯಾ ವಲಯಗಳಿಗೆ ತುಂಬಾ ಉಪಕಾರಿಯಾಗಿದ್ದು , ಇವುಗಳನ್ನು ರೈತರು ಸದುಪಯೋಗಿಸಿಕೊಂಡಾಗ ಮಾತ್ರ ಆರ್ಥಿಕವಾಗಿ ಅಭಿವೃದ್ಧಿ ಹೊಂದಲು ಸಹಕಾರಿಯಾಗಲಿದೆ ಎಂದರು.

ರಾಜ್ಯದ ಸಂಶೋಧನಾ ಸಂಸ್ಥೆಗಳಾದ ಹೆಸರ ಘಟ್ಟ ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ, ಆಡುಗೋಡಿ ಪಶುಸಂಗೋಪನಾ ಸಂಸ್ಥೆ, ಐ.ಆರ್.ಐ. ಮಣ್ಣು ಸರ್ವೇಕ್ಷಣಾ ಸಂಶೋಧನಾ ಸಂಸ್ಥೆ, ಮೀನುಗಾರಿಕಾ ಸಂಶೋಧನಾ ಸಂಸ್ಥೆ ನಿರ್ದೇಶಕರುಗಳು ಹಾಗೂ ಮುಖ್ಯ ಸಂಶೋಧಕರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಇದೇ ಸಂದರ್ಭದಲ್ಲಿ ವಿಜ್ಞಾನಿಗಳನ್ನು ಅಭಿನಂದಿಸಲಾಯಿತು.

ದಿಗಂತ ಚಿತ್ರ



ರಾಷ್ಟ್ರೀಯ ಕೃಷಿ ಪ್ರಾಮುಖ್ಯ ಕೀಟಗಳ ಬ್ಯೂರೋ ಸಂಶೋಧನಾ ಕೇಂದ್ರ, ಏರ್ಪಡಿಸಿದ್ದ ಕೃಷಿ ಸಂಶೋಧನೆಗಳ ಅವಲೋಕನಾ ಸಮಾವೇಶದಲ್ಲಿ ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಸಚಿವ ರಾಧಾ ಮೋಹನ್‌ಸಿಂಗ್ ಭಾಗವಹಿಸಿದ್ದರು.